ಶ್ರೀ ಆರ್. ವಿ. ದೇಶಪಾಂಡೆ (ಸಣ್ಣ ಪ್ರಮಾಣದ ಕೈಗಾರಿಕಾ ರಾಜ್ಯ ಮಂತ್ರಿಗಳು).—

(ಅ) ಇಲ್ಲ.

(ಆ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

ವಿಶ್ವೇಶ್ವರಯ ಕಬ್ಬಿಣ ಮಂತ್ತು ಉಕ್ಕಿನ ಕಾರ್ಖಾನೆಯ ಅಧಿಕಾರಿಗಳ ಸೇವೆಯನ್ನು ಎರವಲು ನೀಡುವ ವಿಷಯ ಕುರಿತು

೧೧೬೮. ಶ್ರೀ ರಾಜುಗೌಡ (ಹನೂರು).—ಮಾನ್ಯ ಭಾರಿ ಹಾಗೂ ಮಧ್ಯಮ ಕೈಗಾರಿಕಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

(ಅ) ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯಲ್ಲಿ ಪರಿಣತಿ ಹೊಂದಿದ ಎಷ್ಟು ಜನ ತಾಂತ್ರಿಕ ಅಧಿಕಾರಿಗಳ ಸೇವೆಯನ್ನು ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆಗೆ ಎರವಲು ಮಾಡಲಾಗಿದೆ ?

(ಆ) ಇಂತಹ ಪರಿಣಿತ ತಾಂತ್ರಿಕ ಅಧಿಕಾರಿಗಳ ಸೇವೆಯನ್ನು ಎರವಲು ಕೊಟ್ಟಿರುವುದರಿಂದ ಸದರೀ ಕಾರ್ಖಾನೆಯ ನಷ್ಟಕ್ಕೆ ಒಂದು ಕಾರಣವಲ್ಲವೇ ?

ಶ್ರೀ ಜೆ. ಹೆಚ್. ಪಟೇಲ್ (ಭಾರಿ ಹಾಗೂ ಮಧ್ಯಮ ಕೈಗಾರಿಕಾ ಮಂತ್ರಿಗಳು).—

(ಅ) ೧೨.

(ಆ) ಇಲ್ಲ.

ಬೀಳಗಿಯಲ್ಲಿ ನ್ಯಾಯಾಲಯ ಸ್ಥಾಪನೆ ಕುರಿತು

೯೯೧. ಶ್ರೀ ಬಾಬುರೆಡ್ಡಿ ವಿ. ತುಂಗಾಳ (ಬೀಳಗಿ).—ಮಾನ್ಯ ನಗರಾಭಿವೃದ್ಧಿ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯಯಿಟ್ಟು ಉತ್ತರಿಸುವರೆ ?

ಅ) ಬೀಳಗಿ ತಾಲ್ಲೂಕಿನಲ್ಲಿ ನ್ಯಾಯಾಲಯ ಸ್ಥಾಪನೆಯ ಬಗ್ಗೆ ಈ ಹಿಂದೆ ಸರ್ಕಾರದವರಿಗೆ ಮನವಿಗಳೇನಾದರೂ ಬಂದಿವೆಯೇ ?

ಆ) ಹಾಗಿದ್ದಲ್ಲಿ, ಇಲ್ಲಿ ಮುನ್ಸೀಫ್ ನ್ಯಾಯಾಲಯವನ್ನು ಸ್ಥಾಪಿಸುವ ವಿಚಾರ ಸರ್ಕಾರದವರ ಪರಿಶೀಲನೆಯಲ್ಲಿದೆಯೆ ?

ಇ) ಹಾಗಿದ್ದಲ್ಲಿ ಸರ್ಕಾರವು ನ್ಯಾಯಾಲಯವನ್ನು ತೆರೆಯಲು ಯಾವ ಕ್ರಮ ಕೈಗೊಂಡಿದೆ ?

ಶ್ರೀ ಎ. ಲಕ್ಷ್ಮೀಸಾಗರ್ (ನಗರಾಭಿವೃದ್ಧಿ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—

ಅ) ಹೌದು.

ಆ) ಹೌದು. ಬೀಳಗಿಯಲ್ಲಿ ಮುನ್ಸೀಫ್ ಮತ್ತು ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ ನ್ಯಾಯಾಲಯ ಸ್ಥಾಪಿಸುವ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ಬೀಳಗಿಯಲ್ಲಿ ನ್ಯಾಯಾಲಯ ಸ್ಥಾಪನೆಯ ಬಗ್ಗೆ ಕರ್ನಾಟಕ ಉಚ್ಚ ನ್ಯಾಯಾಲಯದ ಅಭಿಪ್ರಾಯ ಕೋರಲಾಗಿದೆ. ಉಚ್ಚ ನ್ಯಾಯಾಲಯದ ಅಭಿಪ್ರಾಯ ಬಂದ ನಂತರ ರಾಜ್ಯದ ಹಣಕಾಸಿನ ಪರಿಸ್ಥಿತಿಯನ್ನು ಗಮನದಲ್ಲಿರಿಸಿಕೊಂಡು ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಕರ್ನಾಟಕ ರಾಜ್ಯ ಗೃಹ ಮಂಡಲಿ

೧೪೮೨. ಶ್ರೀ ಬಿ.ಎಸ್. ಚಂದ್ರಶೇಖರಯ್ಯ (ತಿಪಟೂರು).—ವಸತಿ ಮತ್ತು ಸಾರಿಗೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕರ್ನಾಟಕ ರಾಜ್ಯ ಗೃಹ ಮಂಡಳಿಂದ ನಿರ್ಮಾಣವಾದ ಮನೆಗಳನ್ನು ಲಾಟರಿ ಮುಖಾಂತರ ಹಂಚಲಾಗುವುದೆಂಬುದು ನಿಜವೇ ?

ಅ) ಹಾಗಿದ್ದಲ್ಲಿ ಇದನ್ನು ಸಾರ್ವಜನಿಕರ ಗಮನಕ್ಕೆ ಯಾವ ರೀತಿ ತರಲಾಗುತ್ತದೆ,

ಇ) ಲಾಟರಿ ಎತ್ತುವುದು, ಸಾರ್ವಜನಿಕರ ಸಮ್ಮುಖದಲ್ಲಿ ನಡೆಯುತ್ತದೆಯೇ ಹಾಗೂ ಇದರಿಂದ ಇಷ್ಟವುಳ್ಳವರು ಅವರಿವರ ಹೆಸರುಗಳಲ್ಲಿ ಹೆಚ್ಚು ಅರ್ಜಿ ಸಲ್ಲಿಸಿ ಪ್ರಯೋಜನ ಪಡೆದುಕೊಳ್ಳಲು ಅನುಕೂಲ ಮಾಡಿದಂತಾಗುವುದಿಲ್ಲವೇ ?

ಶ್ರೀ ಪಿ.ಜಿ.ಆರ್. ಸಿಂಧ್ಯ (ವಸತಿ ಮತ್ತು ಸಾರಿಗೆ ರಾಜ್ಯ ಮಂತ್ರಿಗಳು).—

ಅ) ಹೌದು.

ಆ) ಸಂಬಂಧಪಟ್ಟ ಕಛೇರಿಗಳ ಸೂಚನಾ ಫಲಕದ ಮೇಲೆ ಪ್ರಕಟಿಸುವುದು ದಿನ ಪತ್ರಿಕೆಗಳಲ್ಲಿ ಪ್ರಕಟಿಸುವುದು ಹಾಗೂ ಹಸ್ತ ಪತ್ರಿಕೆಗಳನ್ನು ಸಂಬಂಧಪಟ್ಟ ಸ್ಥಳಗಳಲ್ಲಿ ಹಂಚುವ ಮುಖಾಂತರ.

ಇ) ಸಾರ್ವಜನಿಕರ ಸಮ್ಮುಖದಲ್ಲಿ ಲಾಟರಿ ಎತ್ತಲಾಗುವುದು.

ಪ್ರಶ್ನೆಯು ಇನ್ನೊಂದು ಭಾಗದಲ್ಲಿ ಸೂಚಿಸಿರುವ ವಿಷಯು ಕರ್ನಾಟಕ ಗೃಹ ಮಂಡಳಿಯ ಅಥವಾ ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

Nationalisation of Bus Routes

457. SRI K.H. PATIL (Gadag)'—Will the Minister of state for Transport & Housing be pleased to state :

a) The bus routes that are yet to be nationalised in the State.

b) Whether there are any proposals before the Government to nationalise all the bus routes ?

SRI P.G.R. SINDHYA (Minister of State for Transport and Housing).—

a) Bus routes in the following districts are yet to be nationalised :—

1. Bangalore.
2. Bidar.
3. Chickmagalore.
4. Chitradurga.
5. Gulbarga.
6. Kodagu.
7. Kolar.
8. Dakshina Kannada.
9. Mandya.
10. Mysore.
11. Raichur.

b) Government is committed to a policy of nationalisation of the passenger transport. Accordingly, Government is considering the nationalisation of new routes on a phased manner.